# ಸ್ವ-ಮದುವೆ ಏಕೆ?

ಬದುಕು ತುಂಬಾ ಚಿಕ್ಕದು. ನಮಗೇನು ಇಷ್ಟವೋ ಅದನ್ನು ಮಾಡುವುದು ಮತ್ತು ನಾವು ಹೇಗೆ ಬದುಕಬೇಕು ಎಂದುಕೊಂಡಿದ್ದೇವೆಯೋ ಹಾಗೆ ಬದುಕುವುದು ಒಳ್ಳೆಯದು. ನಮ್ಮನ್ನು ನಾವು ಗೌರವಿಸಿಕೊಂಡಾಗ, ನಮ್ಮನ್ನು ನಾವು ಪ್ರೀತಿಸಿಕೊಂಡಾಗ ಮಾತ್ರ ಇದು ಅರ್ಥವಾಗುತ್ತದೆ.

ಪ್ರೀತಿ ಎಂಬುದು ಸಾಂಕ್ರಾಮಿಕ. ಪ್ರತಿಕ್ಷಣವನ್ನೂ ನಮ್ಮೊಂದಿಗೆ ನಾವು ಅಥವಾ ನಮ್ಮನ್ನು ಇಷ್ಟಪಡುವವರೊಂದಿಗೆ ಸಂಭ್ರಮಿಸುತ್ತಾ ಬದುಕುವುದು ಅತ್ಯಗತ್ಯ. ಹೃದಯದ ತುಂಬಾ ಪ್ರೀತಿ ಇರುವವರು ಮಾತ್ರವೇ ತನ್ನ ಸಮುದಾಯದ ನೆಮ್ಮದಿಗಾಗಿ ತುಡಿಯುವ ಪರಿಪೂರ್ಣ ಪ್ರಜೆಯಾಗಲು ಸಾಧ್ಯ. ಆಗಲೇ ಈ ಭೂಮಿ ಉಳಿಯುತ್ತದೆ.

ನಾವು ಪ್ರತಿಪಾದಿಸುತ್ತಿರುವ ಸ್ವ–ಮದುವೆಗೆ ಪ್ರೀತಿಯೇ ಆಧಾರ. 'ನಿಮ್ಮನ್ನು ಪರಿಪೂರ್ಣಗೊಳಿಸಲು ಇನ್ನೊಬ್ಬರು ಬೇಕಾಗಿಲ್ಲ. ಸ್ವ–ಮದುವೆಯಿಂದ ನಿಮಗೆ ಪರಿಪೂರ್ಣತೆ ಸಿಗುತ್ತದೆ. ನಿಮ್ಮನ್ನು ನೀವು ಪ್ರೀತಿಸಿಕೊಳ್ಳುವುದನ್ನು ಶುರು ಮಾಡಿದಾಗಲೇ 'ನಾನು ಯಾರು' ಎನ್ನುವ ಒಳದನಿಗೆ ಉತ್ತರ ಹುಡುಕುವ ಪ್ರಯತ್ನ ಆರಂಭವಾಗುತ್ತದೆ. ನಿಮ್ಮನ್ನು ನೀವು ಎಷ್ಟು ಪ್ರೀತಿಸಲು ಸಾಧ್ಯವೋ, ಅಷ್ಟು ಬೇರೆಯವರನ್ನೂ ಪ್ರೀತಿಸುವ ಸಾಮರ್ಥ್ಯ ನಿಮಗೆ ದಕ್ಕುತ್ತದೆ.

ಈಚಿನ ದಿನಗಳಲ್ಲಿ ವಿವಾಹ ವಿಚ್ಛೇದನಗಳ ಸಂಖ್ಯೆ ವಿಪರೀತ ಎನ್ನುವಷ್ಟು ಹೆಚ್ಚಾಗುತ್ತಿದೆ. ನಿಮ್ಮನ್ನು ನೀವು ಮದುವೆಯಾದರೆ ವಿಚ್ಛೇದನದ ಪ್ರಶ್ನೆಯೇ ಬರುವುದಿಲ್ಲ. ನೀವು ಮದುವೆಯಾದವರೊಂದಿಗೆ ಜೀವನವಿಡೀ ಬದುಕುತ್ತೀರಿ. (ಸ್ವ–ಮದುವೆಯ ಔಚಿತ್ಯವನ್ನು imarriedme.com ವಿವರಿಸುವುದು ಹೀಗೆ)

ಸಂಚಲನ ಹುಟ್ಟಿಸಿದಾಕೆ ಲೌರಾ ಮೆಸಿ.

'ಮೊದಲು ನಮ್ಮನ್ನು ನಾವು ಪ್ರೀತಿಸಿಕೊಳ್ಳುವುದನ್ನು ಕಲಿಯಬೇಕು. ಚಂದಮಾಮ ಕಥೆಯಲ್ಲಿ ರಾಜಕುಮಾರಿಯನ್ನು ಮೆರೆಸಲು ರಾಜಕುಮಾರ ಬರಲೇಬೇಕು ಎಂದೇನಿಲ್ಲ. ನನ್ನ ಮನಸಿಗೆ ಒಪ್ಪುವ ಹುಡುಗ ನನ್ನ 40ನೇ ಹುಟ್ಟುಹಬ್ಬದ ಒಳಗೆ ಸಿಗದಿದ್ದರೆ ನನ್ನನ್ನೇ ನಾನು ಮದುವೆಯಾಗುತ್ತೇನೆ ಎಂದು ಗೆಳತಿಯರಿಗೆ ಹೇಳಿದ್ದೆ. ಅದರಂತೆ ಈಗ ನನ್ನನ್ನೇ ನಾನು ಮದುವೆಯಾಗುತ್ತಿದ್ದೇನೆ. ಮುಂದೊಂದು ದಿನ ನಾನು ಇಷ್ಟಪಡುವಂಥ ಹುಡುಗ ಸಿಕ್ಕರೆ ನನ್ನ ಬದುಕನ್ನು ಅವನೊಡನೆ ಹಂಚಿಕೊಳ್ಳಲು ನನಗೆ ಯಾವುದೇ ತಕರಾರಿಲ್ಲ. ಆದರೆ ನನ್ನ ಬದುಕಿನ ಸಂತಸ ಅವನನ್ನು ಅವಲಂಬಿಸಿರುವುದಿಲ್ಲ ಅಷ್ಟೇ' ಎಂದು ಲೌರಾ ತನ್ನ ಅಭಿಪ್ರಾಯವನ್ನು ಭಿಡೆಯಿಲ್ಲದೆ ಹೇಳಿಕೊಂಡಿದ್ದರು.

ಬ್ರಿಟನ್ ಮತ್ತು ಆಸ್ಟ್ರೇಲಿಯಾದಲ್ಲಿ ಹೆಚ್ಚುತ್ತಿರುವ ಸ್ವ–ಮದುವೆಯ ವಿದ್ಯಮಾನ ಹಲವರ ಕೆಂಗಣ್ಣಿಗೂ ಗುರಿಯಾಗಿದೆ. 'ಹೀಗೆ ತನ್ನನ್ನೇ ತಾನು



ಮದುವೆಯಾಗುವುದು ಅಸಹಾಯಕತೆಯನ್ನು ಜಾಹೀರುಪಡಿಸುವ ಹುನ್ನಾರ' ಎಂಬುದು ಜನಪ್ರಿಯ ಟೀಕೆ. ಆದರೆ ಲಿಂಡಾ ಮತ್ತು ಎ.ಜೆ. ಲವ್ ಥರದ ಹಲವರು 'ಮೊದಲು ನಮ್ಮನ್ನು ನಾವು ಪ್ರೀತಿಸಿಕೊಳ್ಳಬೇಕು. ಅದನ್ನು ಕಲಿಯದಿದ್ದರೆ ಬೇರೆ ಯಾರನ್ನೂ ಪ್ರೀತಿಸಲು ನಮ್ಮಿಂದ ಸಾಧ್ಯವಾಗದು' ಎಂದು ಸ್ವ–ಮದುವೆಯನ್ನು ಸಮರ್ಥಿಸಿಕೊಳ್ಳುತ್ತಾರೆ.

'ಏಯ್ ಹುಡುಗಿ, ನಿನಗೆ ಯಾರೂ ಪ್ರೊಪೋಸ್ ಮಾಡುವುದು ಇಷ್ಟವಿಲ್ಲವೇ? ನಿಂಗೊಂದು ಬೆಸ್ಟ್ ಐಡಿಯಾ ಕೊಡ್ಲಾ? ನಿನ್ನನ್ನೇ ನೀನು ಮದುವೆಯಾಗಿಬಿಡು' ಹೀಗೊಂದು ಲೇವಡಿ ಧಾಟಿಯ ವ್ಯಂಗ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಚಾಲ್ತಿಯಲ್ಲಿದೆ.

ತಮ್ಮನ್ನು ತಾವೇ ಮದುವೆಯಾದವರು ಈ ವ್ಯಂಗ್ಯದ ಆಕ್ಷೇಪಕ್ಕೆ ತುಸು ಗಂಭೀರವಾಗಿಯೇ ಉತ್ತರ ಕೊಡುತ್ತಾರೆ. 'ಹಲವು ಕೆಟ್ಟ ಅನುಭವಗಳ ನಂತರ ನನ್ನನ್ನೇ ನಾನು ಮದುವೆಯಾಗಲು ನಿರ್ಧರಿಸಿದೆ. ಇದರರ್ಥ ಮುಂದೆ ನನಗೆ ಯಾರೂ ಪ್ರಪೋಸ್ ಮಾಡಬಾರದು ಎಂದಾಗಲೀ, ನಾನು ಅಂಥ ಪ್ರಪೋಸ್‌ಗಳನ್ನು ಒಪ್ಪುವುದಿಲ್ಲ ಎಂದಾಗಲಿ ಅಲ್ಲ' ಎನ್ನುತ್ತಾರೆ ಎ.ಜೆ. ಲವ್.

ತನ್ನ ಮದುವೆಯ ನಂತರ ಆಕೆ ಫೇಸ್‌ಬುಕ್‌ನಲ್ಲಿ ಒಂದು ಪೋಸ್ಟ್ ಬರೆದುಕೊಂಡಿದ್ದಳು. 'ನನ್ನ ಜೊತೆಗೆ ಈ ಹಿಂದೆ ಇದ್ದವರನ್ನು ದೂರ ಇಡುವುದಕ್ಕಾಗಿ ಅಥವಾ ಇನ್ನು ಮುಂದೆ ನನ್ನ ಜೊತೆಗೆ ಇರಬೇಕು ಎಂದುಕೊಂಡವರು ಬದಿಗೆ ಸರಿಯಲಿ ಎಂಬ ಉದ್ದೇಶದಿಂದ ಈ ಮದುವೆ ನಡೆದಿಲ್ಲ' ಎಂದು ಹೇಳಿಕೊಂಡಿದ್ದಳು. ಈಕೆಯ ಮಾರ್ಗದರ್ಶನ, ಪ್ರೇರಣೆಯಿಂದ ಒಂದೇ ವರ್ಷದಲ್ಲಿ ಸುಮಾರು 200 ಯುವತಿಯರು ತಮ್ಮನ್ನು ತಾವೇ ಮದುವೆಯಾಗಿದ್ದಾರೆ.

ಈಚಿನ ದಿನಗಳಲ್ಲಿ ಸ್ವ–ಮದುವೆ ಒಂದು ವ್ಯಾಪಾರದ ಅವಕಾಶವಾಗಿಯೂ ಮಾರ್ಪಟ್ಟಿದೆ. Imarriedme.com ಸೇರಿದಂತೆ ಹಲವು ವೆಬ್‌ಸೈಟ್‌ಗಳು ಸ್ವ–ಮದುವೆಗೆ ಅಗತ್ಯವಿರುವ ಮಾರ್ಗದರ್ಶನ ಮತ್ತು ಪರಿಕರಗಳನ್ನು ಒದಗಿಸುತ್ತಿದೆ. 'ಐ ಮ್ಯಾರೀಡ್ ಮಿ' ಹೆಸರಿನ ಪುಟಾಣಿ ಬಾಕ್ಸ್ ಒಂದನ್ನು ಈ ವೆಬ್‌ಸೈಟ್ ಮಾರುತ್ತಿದೆ. ಅದರಲ್ಲಿ ಮಹಿಳೆಯೊಬ್ಬರು ತಮ್ಮನ್ನು ತಾವು ಮದುವೆಯಾಗಲು ಬೇಕಾಗುವ ಹಲವು ವಸ್ತುಗಳು ಇರುತ್ತವೆ.

ಸ್ವ–ಮದುವೆಗಳು ಖರ್ಚಿನ ಆಯಾಮದಿಂದಲೂ ದಾಖಲೆ ಬರೆಯುತ್ತಿವೆ. ಇಟಲಿಯ ಲೌರಾ ಮೆಸಿ ತನ್ನ ಮದುವೆಗಾಗಿ ₹63 ಲಕ್ಷ ಖರ್ಚು ಮಾಡಿದ್ದಳು. ಜಾನಪದ ಕಥೆಗಳಲ್ಲಿ ಬರುವ ರಾಜಕುಮಾರಿಯಂತೆ ತನ್ನನ್ನು ತಾನು ಅಲಂಕರಿಸಿಕೊಂಡಿದ್ದ ಲೌರಾ ಬೆಟ್ಟದ ಮೇಲಿನ ಅರಮನೆ ಮಾದರಿಯ ಭರ್ಜರಿ ಕೇಕ್ ಕತ್ತರಿಸಿದ್ದಳು.

ಆಧುನಿಕ ಸಂಬಂಧಗಳು ಸಂಕೀರ್ಣವಾಗುತ್ತಿವೆ. ಮುಂದುವರಿದ ದೇಶಗಳಲ್ಲಿ ವಿಚ್ಛೇದನ ಪ್ರಕರಣಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗುತ್ತಿದೆ. ಒಂದೇ ಸೂರಿನಡಿ ವಾಸವಿದ್ದರೂ ಅತೃಪ್ತಿಯನ್ನೇ ಉಸಿರಾಡುವ ಸಂಬಂಧಗಳ ಸಂಖ್ಯೆಯೂ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಮಹಿಳೆಯರು ಸ್ವ–ಮದುವೆಯನ್ನು ಅನುಕರಣೀಯ ಮಾರ್ಗ ಎಂದು ಭಾವಿಸುತ್ತಿದ್ದಾರೆ. ಆಧುನಿಕ ಸಂಬಂಧಗಳಿಗೆ ಅದನ್ನು ಪರ್ಯಾಯ ಎಂದುಕೊಳ್ಳುತ್ತಿದ್ದಾರೆ. ■